www.bwssb.karnataka.gov.in Telephone: 080-22945253

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

# BANGALORE WATER SUPPLY AND SEWERAGE BOARD

## ಮುಖ್ಯ ಅಭಿಯಂತರರು(ವಿನ್ಯಾಸ) ರವರ ಕಛೇರಿ

9 ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009

ಸಂ: ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ತಾ.ಸ(ವಿ)/ಸ.ಅ(ವಿ)/419 /2022-23 ದಿನಾಂಕ: 07.07.2022

---

## ಜ್ಞಾಪನಾ ಪತ್ರ

ವಿಷಯ: 2022-23ನೇ ಆರ್ಥಿಕ ವರ್ಷದ 2ನೇ ತ್ರೈಮಾಸಿಕ ಅವಧಿಗೆ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ಅನುಸೂಚಿ ದರಪಟ್ಟಿ 2021-22 ರಲ್ಲಿ ಕೆಲವು ಕೊಳವೆಗಳ ದರಗಳ ಪರಿಷ್ಕರಣೆ.

ಉಲ್ಲೇಖ:

1. ಆ.ಸಂ: ಲೋ.ಇ-51 ಆರ್‌ಡಿಎಫ್ 2019,ಬೆಂಗಳೂರು ದಿ:25.03.2022.
2. ಸ.ಆ.ಸಂ.ನ.ಅ.ಇ 08/ಐಎನ್‌ಐ2021 (ಇ-ಕಛೇರಿ), ಬೆಂಗಳೂರು ದಿ:04.12.2021.
3. ಸಂ.ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ತಾ.ಸ(ವಿ)/2659/2021-22 ದಿ:25.03.2022
4. ಸಂ.ಬೆಂ.ಜ.ಮಂ/ಮು.ಅ(ವಿ)/ಅ.ಮು.ಅ(ವಿ)/ತಾ.ಸ(ವಿ)/04/2022-23 ದಿ:05.04.2022
5. No:BWSSB/CEDTE/ACE(Design)/TA(D)/228/2022-23 Dt:09.06.2022.
6. ದಿ:04.07.2022 ರಂದು ನಡೆದ ಖಾಯಂ ನಿರತ ಏಕರೂಪ ದರಪಟ್ಟಿ ತಯಾರಿಕಾ ಸಮಿತಿಯ 2022-23 ನೇ ಸಾಲಿನ 4 ನೇ ಸಭೆಯ ನಡಾವಳಿಗಳು.

*****

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ಅನುಸೂಚಿ ದರಪಟ್ಟಿ:2021-22 ನ್ನು ದಿನಾಂಕ:25.03.2022 ರಿಂದ ಜಾರಿಗೆ ಬರುವಂತೆ ಉಲ್ಲೇಖ (3) ರ ಜ್ಞಾಪನಾ ಪತ್ರದಲ್ಲಿ ಅಳವಡಿಕೆಗೆ ಪ್ರಕಟಿಸಲಾಗಿದೆ.

ಸದರಿ ಏಕರೂಪ ಅನುಸೂಚಿ ದರಪಟ್ಟಿ 2021-22 ರ ತಯಾರಿಕೆಯಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದ ಸಾಮಾಗ್ರಿಗಳಾದ ವಿವಿಧ ಕೊಳವೆಗಳಿಗೆ 2021-22 ಸಾಲಿನ 1 ನೇ ಮತ್ತು 2 ನೇ ತ್ರೈ ಮಾಸಿಕದಲ್ಲಿದ್ದಂತಹ ಮೂಲ ದರಗಳನ್ನು ಪರಿಗಣಿಸಲಾಗಿದೆ.

ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ಮುಖ್ಯ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಇವರು ಕೆ.ಯು.ಡಬ್ಲ್ಯೂ.ಎಸ್.ಎಸ್.ಬಿ, ಮತ್ತು ಆರ್.ಡಿ.ಡಬ್ಲ್ಯೂ&ಎಸ್.ಡಿ ಇಲಾಖೆಗಳೊಂದಿಗೆ ಸಮಾಲೋಚಿಸಿ ಎಲ್ಲಾ ರೀತಿಯ ಕೊಳವೆಗಳ (Pipes) ಬೆಲೆಗಳನ್ನು ಪ್ರತಿ ತ್ರೈಮಾಸಿಕ ಅವಧಿಗೆ ಅಥವಾ ಶೇ. 10% ಕ್ಕಿಂತ ದರ ವ್ಯತ್ಯಾಸವಾದಲ್ಲಿ ಪರಿಷ್ಕೃತ ದರಗಳನ್ನು ಪ್ರಕಟಮಾಡಬೇಕಾಗಿರುತ್ತದೆ.

ಈ ಸಂಬಂಧ 2022-23ನೇ ಆರ್ಥಿಕ ವರ್ಷದ 2ನೇ ತ್ರೈಮಾಸಿಕ ಅವಧಿಗೆ ಪರಿಷ್ಕೃತ ದರಗಳನ್ನು ಪ್ರಕಟಮಾಡಲು ಉಲ್ಲೇಖ (5) ರ ಪತ್ರದ ಮುಖೇನ ಸಮಿತಿಯ ಅಧ್ಯಕ್ಷರು ವಿವಿಧ ರೀತಿಯ ಕೊಳವೆಗಳ ಬೆಲೆಗಳನ್ನು ಮೂರು ಇಲಾಖೆಗಳು ವಿವಿಧ ತಯಾರಕರು / ವಿತರಕರು / ಸರಬರಾಜುದಾರರಿಂದ Quotation ಗಳನ್ನು ಪಡೆದು ತುಲಾನಾತ್ಮಕ ಪಟ್ಟಿಯೊಂದಿಗೆ ಸಲ್ಲಿಸಲು ಉಲ್ಲೇಖ (2) ರ ಆದೇಶದನ್ವಯ ರಚಿತವಾಗಿರುವ ಮೂರು ಇಲಾಖೆಗಳ ಏಕರೂಪ ದರಪಟ್ಟಿ ತಯಾರಿಕೆ ಸಮಿತಿಗೆ ಸೂಚಿಸಲಾಗಿ, ದಿ:04.07.2022 ರಂದು ಸದರಿ ಸಮಿತಿಯು ಸಭೆ ಸೇರಿ, ಸಲ್ಲಿಕೆಯಾದ Quotation ಗಳು ಹಾಗೂ ಅವುಗಳ ತುಲಾನಾತ್ಮಕ ಪಟ್ಟಿಗಳನ್ನು ಪರಿಶೀಲಿಸಿ ಪರಿಷ್ಕೃತ ದರದ ಬಗ್ಗೆ ಆದೇಶ ಹೊರಡಿಸಲು ಉಲ್ಲೇಖ (6)ರ ನಡಾವಳಿಗಳ ಅನುಸಾರ ತೀರ್ಮಾನಿಸಿತು.

**ಆದೇಶ:**

ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳ ಏಕರೂಪ ದರಪಟ್ಟಿ: 2021–22 ರಲ್ಲಿನ ಈ ಕೆಳಗಿನ ಅಂಶಗಳ ದರಗಳನ್ನು ಕೋಷ್ಟಕದಲ್ಲಿ ಸೂಚಿಸಿರುವಂತೆ ಶೇಕಡವಾರು ಹೆಚ್ಚಳದೊಂದಿಗೆ ಅಳವಡಿಸಿಕೊಳ್ಳುವುದು. ಉಳಿದಂತೆ ಸದರಿ ದರಪಟ್ಟಿ 2021–22 ಸಂಪುಟ – V ರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಈ ಪರಿಷ್ಕೃತ ದರಗಳನ್ನು ರಾಜ್ಯ ವ್ಯಾಪ್ತಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಕೈಗೊಳ್ಳುವ ಎಲ್ಲಾ ಇಲಾಖೆಗಳಿಗೆ ಅನ್ವಯವಾಗುವಂತೆ **ದಿನಾಂಕ: 07.07.2022 ರಿಂದ ಮುಂದಿನ ಆದೇಶದವರೆಗೆ ಜಾರಿಗೆ ತರಲಾಗಿದೆ.** ಉಲ್ಲೇಖ (4) ರ ತಿದ್ದುಪಡಿ ಜ್ಞಾಪನಾ ಪತ್ರದ ಆದೇಶವನ್ನು ಈ ಮೂಲಕ ರದ್ದು ಪಡಿಸಲಾಗಿದೆ.

| Sl. No. | Items in CSR 2021-22 Volume-V | Corresponding SOR Code Nos. in CSR 2021-22 Volume-V | Percentage considered over existing **finished rates** of CSR 2021-22 Volume-V in the previous Corrigendum Memorandum issued vide ref(4) w.e.f. 05.04.2022 | Percentage to be considered over existing **finished rates** of CSR 2021-22 Volume-V **w.e.f. 07.07.2022** |
|---|---|---|---|---|
| 1 | **DI Pipes** | E010 to E020 | +35% | **+35%** |
| 2 | **HDPE Pipes** | K010 to K100 | +34% | **+34%** |
| 3 | **GI Pipes** | N005, N010, N020 | +67% | **+27%** |
| 4 | **O-PVC Pipes** | M050 | NIL | **-19%** |
| 5 | MS Pipes | F010 to F280 | +15% | The finished rates published in CSR 2021-22 Volume-V remain the same w.e.f. 07.07.2022. |
| 6 | PVC Pipes | M010 & M150 | +26% | |
| 7 | Trenchless Works | U005, U007, U030 | +10% | |

**ಮುಖ್ಯ ಅಭಿಯಂತರರು(ವಿನ್ಯಾಸ) (ಪ್ರಭಾರ)**
**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**
**ಹಾಗೂ ಏಕರೂಪ ದರಪಟ್ಟಿ ಸಮಿತಿ ಅಧ್ಯಕ್ಷರು**

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ಅನುಸೂಚಿ ದರಗಳ ಪರಿಶೀಲನಾ ಸಮಿತಿ ರವರ ಘನ ಮಾಹಿತಿಗಾಗಿ.
2. ಸರ್ಕಾರದ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು, ಅನುಸೂಚಿ ದರಗಳ ರಚನಾ ಸಮಿತಿ ರವರ ಘನ ಮಾಹಿತಿಗಾಗಿ.
3. ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ/ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು / ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು, ರವರ ಘನ ಮಾಹಿತಿಗಾಗಿ.
4. ಸರ್ಕಾರದ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ (ವೆಚ್ಚ), ಬೆಂಗಳೂರು ರವರ ಘನ ಮಾಹಿತಿಗಾಗಿ.
5. ಅಧ್ಯಕ್ಷರು, ತಾಂತ್ರಿಕ ಕಾರ್ಯಪಡೆ, ಬೆಂಗಳೂರು, ಏಕರೂಪ ಅನುಸೂಚಿ ದರಪಟ್ಟಿ ರವರ ಘನ ಮಾಹಿತಿಗಾಗಿ.
6. ಪ್ರಧಾನ ಅಭಿಯಂತರರು/ಮುಖ್ಯ ಅಭಿಯಂತರರು BWSSB, KUWS&DB and RDW&SD ಹಾಗೂ ಸರ್ಕಾರದ ಇತರ ಇಲಾಖೆ / ನಿಗಮ / ಮಂಡಳಿ ರವರ ಮಾಹಿತಿಗಾಗಿ.
7. ಅಧೀಕ್ಷಕ ಅಭಿಯಂತರರು / ಅಪರ ಮುಖ್ಯ ಅಭಿಯಂತರರು BWSSB, KUWS&DB and RDW&SD ಹಾಗೂ ಸಮಿತಿಯ ಸದಸ್ಯರು ಹಾಗೂ ಸರ್ಕಾರದ ಇತರೆ ಇಲಾಖೆ/ನಿಗಮ ಮಂಡಳಿ ರವರ ಮಾಹಿತಿಗಾಗಿ.
8. ಎಲ್ಲಾ ಕಾರ್ಯ ಪಾಲಕ ಅಭಿಯಂತರರು, ಸರ್ಕಾರದ ಎಲ್ಲಾ ಇಲಾಖೆ/ ನಿಗಮ/ ಮಂಡಳಿ ರವರ ಮಾಹಿತಿಗಾಗಿ.
9. ಕಛೇರಿ ಕಡತಕ್ಕಾಗಿ.